

ಶಿಕ್ಷಕರಾದರು. ಅವರು ಶಾಲೆಯಲ್ಲಿ 'ಜೇನುಹುಟ್ಟು', 'ಗೆಳೆಯ' ಹಸ್ತಪತ್ರಿಕೆಗಳನ್ನು ಪ್ರಾರಂಭಿಸಿ ವಿದ್ಯಾರ್ಥಿಗಳಲ್ಲಿ ಸಾಹಿತ್ಯ ರಚನಾ ಆಸಕ್ತಿಯನ್ನು ಬೆಳೆಸಿದರು. 'ಮೈತ್ರಿಯ ಸೂತ್ರದ ಹೊಸಮಣಿ' ಪೋಣಿಸಿಕೊಳ್ಳುತ್ತ ಸಾಗಿದ ಅವರು 1921ರಲ್ಲಿ 'ಗೆಳೆಯರ ಗುಂಪು' ಕಟ್ಟಿದರು.

ಬೇಂದ್ರೆಯವರು ಕವಿ ರವೀಂದ್ರನಾಥ ಟ್ಯಾಗೋರ್, ಯೋಗಿ ಶ್ರೀ ಅರವಿಂದ, ಐರಿಷ್ ಕವಿ ಜಾರ್ಜ್ ರಸಲ್ ಹಾಗೂ ಖಲೀಲ್ ಗಿಬ್ರಾನ್‌ರನ್ನು ತಮ್ಮ ನಾಲ್ವರು ಗುರುಗಳೆಂದು ಕರೆದುಕೊಂಡಿದ್ದಾರೆ. ರವೀಂದ್ರರು ಮತ್ತು ಅರವಿಂದರು ತಮ್ಮಲ್ಲಿ ಉಂಟುಮಾಡಿದ ಆತ್ಮಜಾಗೃತಿಯನ್ನು ಹೀಗೆ ಕಾವ್ಯದಲ್ಲಿ ಕಡೆದಿಟ್ಟಿದ್ದಾರೆ.

ಅರಿವೆಂಬ ರವಿಯು ಮೂಡಲು
ಗುರುವೆಂಬಾತ್ಮಾರವಿಂದವರಳಿತು ನನ್ನೊಳ್
('ನರಬಲಿ' – 'ಗರಿ' ಸಂಕಲನ)

ತತ್ವಜ್ಞಾನಿ ಎಮರ್ಸನ್‌ನ ಪ್ರಕಾರ 'ಪ್ರತಿಭೆಯೆಂದರೆ ಮನುಷ್ಯ ತಾನು ರೂಪಿಸಿಕೊಂಡಿರುವ ಸ್ವ ಚಿಂತನೆಗಳನ್ನು ಅಥವಾ ಕಂಡುಕೊಂಡ ಜೀವನ ಸತ್ಯಗಳನ್ನು ಪ್ರಾಮಾಣಿಕವಾಗಿ ಅನುಸರಿಸುವುದು'. ಬೇಂದ್ರೆ ಆ ಬಗೆಯ ಪ್ರತಿಭಾವಂತ ಕವಿಗಳಾಗಿದ್ದರು. ಅವರು ಸ್ವತಂತ್ರದ ತತ್ವಗಳನ್ನು ಅನುಸರಿಸುತ್ತ ಜೀವನ ನಡೆಸಿದರು. ವ್ಯಕ್ತಿಗತ ಸ್ವಾತಂತ್ರ್ಯ, ಸಾಮಾಜಿಕ ಸ್ವಾತಂತ್ರ್ಯ ಮತ್ತು ರಾಷ್ಟ್ರ ಸ್ವಾತಂತ್ರ್ಯಗಳನ್ನು ಏಕಸೂತ್ರದಲ್ಲಿ ಹಿಡಿಯಲು ಪ್ರಯತ್ನಿಸಿ ಯಶಸ್ವಿಯಾದರು. ಆ ಚಿಂತನೆಯ ಕಾವ್ಯ ಸಹೃದಯರಿಗೆ ತುಂಬಾ ಆಪ್ತವಾಯಿತು.

ಬೇಂದ್ರೆಯವರು 1930ರಲ್ಲಿ ಬರೆದು, 1932ರಲ್ಲಿ ಅವರ ಪ್ರಥಮ ಕವನ ಸಂಕಲನ 'ಗರಿ'ಯಲ್ಲಿ ಪ್ರಕಟವಾದ ಕವನ 'ನರಬಲಿ'. ಅದು ಸ್ವಾತಂತ್ರ್ಯ ಹೋರಾಟಕ್ಕೆ ಯುವಕರನ್ನು ಹುರಿದುಂಬಿಸುವುದಾಗಿತ್ತು. ಅದರ ಕೆಲವು ಸಾಲುಗಳು ಹೀಗಿವೆ:

ನೀತಿಯ ಭೂತವೆ ಹೊರಡಿಲ್ಲಿಂದ
ದಯೆಯ ದೆವ್ವವೆ ನೀ ಹೊರಡು
ಕರುಳಿನ ಮರುಳೆ ಓಡಿಲ್ಲಿಂದ
ನ್ಯಾಯರಾಕ್ಷಸನೆ ನೀನೋಡು
ಬಲಗಾಲ್ ಬುಡದಿಂ ಬಿಡುಗಡೆ ಬಿಡಿಸಲು
ನರಬಲಿಯೇ ಬೇಕು!

ಅದು ಬ್ರಿಟಿಷರ ಕೆಂಗಣ್ಣಿಗೆ ಗುರಿಯಾಯಿತು. ಅವರು ಬೇಂದ್ರೆಯವರನ್ನು 1932ರಲ್ಲಿ 3 ತಿಂಗಳು ಬೆಳಗಾವಿಯ ಹಿಂಡಗಲಾ ಜೈಲಿನಲ್ಲಿಟ್ಟರು. ಅನಂತರ 9 ತಿಂಗಳು ಧಾರವಾಡದ ಬಳಿಯ ಮುಗದ ಗ್ರಾಮದಲ್ಲಿ ನಜರ್‌ಬಂದ್ ಶಿಕ್ಷೆಯಲ್ಲಿಟ್ಟರು.

ಬೇಂದ್ರೆಯವರಿಗೆ ಯಾರೂ ಕೆಲಸ ಕೊಡಬಾರದೆಂದು ಬ್ರಿಟಿಷರು ಆದೇಶ ಹೊರಡಿಸಿದರು. ಆಗ ನಿರಾಶರಾಗದೆ, ಬೇಂದ್ರೆ ಸರಳ ಬದುಕನ್ನು ತಮ್ಮ ಜೀವನಶೈಲಿಯಾಗಿ ಮಾಡಿಕೊಂಡಿದ್ದರಿಂದ ವಿಭಿನ್ನವಾಗಿ ಯೋಚಿಸಿದರು. ತನಗೆ ಲಭ್ಯವಿರುವ ನೈಸರ್ಗಿಕ ಪ್ರತಿಭಾಶಕ್ತಿಯನ್ನು ಪ್ರಜ್ವಲಗೊಳಿಸಿಕೊಳ್ಳುವ ಬಗ್ಗೆ ಚಿಂತಿಸಿದರು. ತನ್ನಲ್ಲಿ ಒಂದಾಗಿರುವ ಸಹಜ ಸಾಮರ್ಥ್ಯದ ವಿದ್ಯೆ, ಅಧ್ಯಯನದ ಕಡೆ ಗಮನ ಕೊಡಲು ನಿರ್ಧರಿಸಿದರು. ಎಂ.ಎ. ಅಧ್ಯಯನ ಮಾಡಲು 1933ರಲ್ಲಿ ತಮ್ಮ 37ನೇ ವಯಸ್ಸಿನಲ್ಲಿ ಪುಣೆಗೆ ಹೋದರು. ಮಧ್ಯವಯಸ್ಸಿನ, ವಿದ್ಯಾವಂತ ಸಂಸಾರಿಯ ಒಳನೋವು, ಭಾವತುಮುಲವನ್ನು 'ಸಖೀಗೀತ' ಕಾವ್ಯದಲ್ಲಿ ಹೀಗೆ ವರ್ಣಿಸಿದರು:

'ನರಬಲಿ' ಕವನವು ಬಲಿ ಮಾಡಿತೆನ್ನನು
ಹೆಳವನಿದ್ದಲ್ಲಿಗೆ ಹೊಳೆ ಬಂದಿತು.
ಮನೆಯನು ಮುರಿದಿತು ಹಾರುವಿಹಂಗಮ!
ಜಂಗಮದೀಕ್ಷೆಯು ನಿನಗೆಂದಿತು.

ಬೇಂದ್ರೆಯವರಿಗೆ 1936ರಿಂದ 1944ರವರೆಗೆ ಸ್ಥಿರ ನೌಕರಿಯಿಲ್ಲದಿರುವಾಗ ಮಾಸ್ತಿಯವರು ಅವರಿಗೆ 'ಜೀವನ' ಪತ್ರಿಕೆಯ ಸಂಪಾದಕರನ್ನಾಗಿ ನೇಮಿಸಿಕೊಂಡು ಆಸರೆಯಾದರು.

## ಸ್ವಾತಂತ್ರ್ಯಾನಂತರದ ಕವನಗಳು

ಬೇಂದ್ರೆಯವರು 1958ರಲ್ಲಿ ಭಾರತದ ಹುಟ್ಟುಹಬ್ಬದಂದು ಬರೆದ ಚಿಂತನಶೀಲ ಕವನ 'ಸ್ವಾತಂತ್ರ್ಯ ವರ್ಧಂತಿ'. ಅದು ಶ್ರಾವಣಮಾಸದಲ್ಲಿ ಹಸಿರು ಹೊಮ್ಮಿದಂತೆ 'ಜನಜನವೂ ಸೃಜನಶೀಲ – ಸ್ವಾತಂತ್ರ್ಯದ ಜೀವನಾ' ಎಂದು ಸಾರಿದೆ. ಸ್ವಾತಂತ್ರ್ಯದ ಲಕ್ಷಣವನ್ನು ಹೇಳುತ್ತ, ನಾವು ಜವಾಬ್ದಾರಿಯಿಂದ ನಡೆದುಕೊಳ್ಳಬೇಕಾದ ರೀತಿಯನ್ನು ಕವಿ ಹೀಗೆ ತಿಳಿಸಿದ್ದಾರೆ:

ಸ್ವೈರತೆಗೊ ಸ್ವಾತಂತ್ರಕು ಇಹುದು ಅಜಗಜಾಂತರಾ
ಸುವ್ಯವಸ್ಥೆ ಮಹಾತಂತ್ರ, ಬದ್ಧತೆ ಬರಿಯಂತರಾ.

ಅವರು ಅದೇ ವರ್ಷ 'ಸ್ವತಂತ್ರ ಭಾರತವನ್ನು ಆಳುವವರು ಬಂಡವಾಳಶಾಹಿ ಸಿರಿವಂತರು' ಎಂದು ಹೇಳಿ, ಆ ಜನ ದೇಶವನ್ನು ಯಂತ್ರದಂತೆ ಬಾಗಿಸಿ ಜನವಿರೋಧಿ ತಂತ್ರದಲ್ಲಿರುವುದನ್ನು ಕಂಡು ನೊಂದಿದ್ದಾರೆ. ಸ್ವಾತಂತ್ರ್ಯ ಪಡೆಯಲು ಕಂಡ ಕನಸು ಕಸವಾಗಿಬಿಟ್ಟಿದೆ ಎಂದು ದುಃಖಿಸಿ, 'ಇದು ಸ್ವಾತಂತ್ರ್ಯವೊ?' ಎಂದು ಪ್ರಶ್ನಿಸುತ್ತ ಕವನ ರಚಿಸಿದ್ದಾರೆ. ಜನರ ಜೀವರಸ ಹಿಂಡುವ ಕ್ಷುಲ್ಲಕ ನಾಯಕರ ನಯವನ್ನು ಛೇಡಿಸಿದ್ದಾರೆ:

ಸ್ವಾತಂತ್ರ್ಯವೋ ಇದು ಯಾ ತಂತ್ರವೋ
ಬಲ್ಲವರ ಕೈಗೆ ಬಾಗುವ ಯಂತ್ರವೋ.

***

ಸೋತೆ ಸೋತೆನು ಎಂದು ಸಾಯುವೊಲು ಕೀರುತಿದೆ
ಗೀತದೊಳೆ ಹೀರುತಿದೆ ಜೀವರಸವ
ತನ್ನ ಕಸುವನ್ನೆಲ್ಲ ಕಸವೆಂದು ಎಸೆಯುತ್ತ
ಜೋಗ ಪ್ರಪಾತವನೆ ಧುಮುಕಿ ಕೆಳಗೋ.
(ನಮನ)

## ಶಕಪುರುಷನ ಶತಮಾನ

ಬೇಂದ್ರೆಯವರು ರಚಿಸಿದ, 1969ರ ಮಹಾತ್ಮಾಗಾಂಧಿ ಜನ್ಮಶತಾಬ್ದಿಯ ಸ್ಮರಣೆಯ ಕವನ 'ಶಕಪುರುಷನ ಶತಮಾನ'. ಅದರಲ್ಲಿಯ ಕೆಲವು ಚಿಂತನಶೀಲ ನುಡಿಗಳು ಹೀಗಿವೆ:

ನೀನು ರಾಮನ್ನ ನೆನಿಸಿ, ರವಿ ಆದಿ.
ನಾವು ರಾಮಾಯಣ ನೆನಸಿ ಕವಿ ಆದಿವಿ.
ಇದು ಪವಾಡ, ಮನಮೋಹನದಾಸ! ಶಕಪುರುಷ ನೀನು||

***

ನಾವು ಏನ ಮರತರೂ
ನೀನು ಬಾಳಿದೀ ಅಂತ ನಾವು ಬದುಕಿದ್ದೀವಿ
ಇದನ್ನ ಮರಿಯೋ ಹಾಂಗಿಲ್ಲಾ.

***

ಇತಿಹಾಸ ಸಾರತದ ನೂರು ವರ್ಷಾತು ಮಗನs ಅಂತ.
ಸಣ್ಣ ಕಣ್ಣಿಗೆ ದೊಡ್ಡ ಸೂರ್ಯ ಕಂಡಾನು
ಸಣ್ಣ ಮನಸ್ಸಿಗೆ ಮಹಾತ್ಮಾ ಒಪ್ಪಿಗಾಗೋದಿಲ್ಲ.
(ಇದು ನಭೋವಾಣಿ)

ಬೇಂದ್ರೆಯವರಂತೆ ಸ್ವಾತಂತ್ರ್ಯದ ಹಂಬಲ ಮತ್ತು ಮಹತ್ವವನ್ನು ಕಾವ್ಯದಲ್ಲಿ ಹಿಡಿದಿಟ್ಟ ಕವಿಗಳು ಕನ್ನಡದಲ್ಲಿ ಹೆಚ್ಚಿಗಿಲ್ಲ. ಬೇಂದ್ರೆ ನಿಜವಾದ ಅರ್ಥದಲ್ಲಿ 'ಭುವನದ ಭಾಗ್ಯ.'

ಪ್ರತಿಕ್ರಿಯಿಸಿ: feedback@sudha.co.in